**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್.ಸಿ.ಸಂಖ್ಯೆ – 5011/2024**

**ಫಿರ್ಯಾದುದಾರರು:–** ಸರಕಾರದ ಪರವಾಗಿ

**ಕೆ ಆರ್ ನಗರ ಪೊಲೀಸ್ ಠಾಣೆ .**

**– ವಿರುದ್ಧ –**

**ಆರೋಪಿತರು:–**

1. **ಕೌಸಿಕ್ ಎಂ ಎಂ** ಬಿನ್ ಮಾದೇಗೌಡ ಎಂ ಜಿ
   ವಯಸ್ಸು ಸುಮಾರು 23 ವರ್ಷಗಳು,
   ಕೂಲಿ ಕೆಲಸ,
2. **ಲಯನ @ ಲಯನ ಕುಮಾರ**
   ಬಿನ್ ಮಹದೇವ ಕೆ
   ವಯಸ್ಸು ಸುಮಾರು 22 ವರ್ಷಗಳು,
   ವ್ಯವಸಾಯ,
3. **ಸಚೀನ ಲೇ ರವಿ**
   ವಯಸ್ಸು ಸುಮಾರು 20 ವರ್ಷಗಳು,
   ವಾಸ: ಗುಂಗ್ರಳ ಛತ್ರ ಗ್ರಾಮ, ಮೈಸೂರು ತಾ:
4. **ವರುಣ ಎಂ ಆರ್ ಬಿನ್ ರಾಮಕೃಷ್ಣ**
   ವಯಸ್ಸು ಸುಮಾರು 23 ವರ್ಷಗಳು,
5. **ಭಾಸ್ಕರ ಬಿನ್ ಪಾಪೇಗೌಡ**
   ವಯಸ್ಸು ಸುಮಾರು 29 ವರ್ಷಗಳು,
6. **ಪುರುಷೋತ್ತಮ @ ಪುರುಷ**
   ಬಿನ್ ಲೇ ಮಾದೇಗೌಡ
   ವಯಸ್ಸು ಸುಮಾರು 30 ವರ್ಷಗಳು,
7. **ಸ್ವಾಮಿ @ ಸೋಮಶೇಖರ**
   ಬಿನ್ ಲೇ ಸಿದ್ದೇಗೌಡ
   ವಯಸ್ಸು ಸುಮಾರು 30 ವರ್ಷಗಳು,

**1,2,4 ರಿಂದ 7 ರ ವಾಸ:** ಮೂಲೆಪೆಟ್ಲು ಗ್ರಾಮ,
ಕೆ ಆರ್ ನಗರ ತಾ: ಮೈಸೂರು.

**ಎಸ್ ಸಿ ಸಂಖ್ಯೆ– 5011/2024**

**ದೋಷಾರೋಪಣೆ**

ನಾನು ಟಿ.ಗೋವಿಂದಯ್ಯ., 8 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಹುಣಸೂರು ಪೀಠ, ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ–

ಈ ಪ್ರಕರಣದಲ್ಲಿ ಮೃತ ಬಾಲರಾಜು ಮತ್ತು ಆರೋಪಿತರುಗಳಾದ ನೀವುಗಳು ಕ್ಷುಲ್ಲಕ ಕಾರಣಕ್ಕೆ ದಿನಾಂಕ 22.06.2020 ಕ್ಕೆ ಹಿಂದೆ ಗಲಾಟೆ ಮಾಡಿಕೊಂಡಿದ್ದು ಆರೋಪಿತರುಗಳಾದ ನೀವುಗಳು ಅದೇ ವಿಚಾರದಲ್ಲಿ ಮೃತ ಬಾಲರಾಜನ ಜೊತೆಯಲ್ಲಿ ಪದೇ ಪದೇ ಗಲಾಟೆ ಮಾಡುತ್ತಿದ್ದು, ದಿನಾಂಕ 22.06.2020 ರಂದು ಸಂಜೆ ಸುಮಾರು 07:30 ಗಂಟೆಯ ಸಮಯದಲ್ಲಿ ಚಾಸಾ–1 ಮತ್ತು ಮೃತ ಬಾಲರಾಜ್ ರವರು ಮನೆಯಲ್ಲಿರುವಾಗ ಆರೋಪಿ 1 ಮತ್ತು 2 ಗಳಾದ ನೀವುಗಳು ಚಾಸಾ–1 ರವರ ಮನೆಯ ಬಳಿಯಲ್ಲಿ ಹೋಗಿ ನಿಮ್ಮ ಹುಡುಗ ಬಾಲು ಎಲ್ಲಿ ಎಂದು ಕೇಳಿದ್ದು, ಆಗ ಚಾಸಾ–1 ರವರು ಅವನಿಗೆ ಹುಷಾರಿಲ್ಲ ರೂಂನಲ್ಲಿ ಮಲಗಿದ್ದಾನೆ ಎಂದು ತಿಳಿಸಿದ್ದು, ಅವನನ್ನು ಕರೆಯಿರಿ ಮಾತನಾಡಬೇಕು ಎಂದು ತಿಳಿಸಿದಾಗ, ಬಾಲರಾಜ್ ರವರು ರೂಂನಿಂದ ಬಂದು ಆರೋಪಿ 1 ಮತ್ತು 2 ಆದ ನಿಮ್ಮಗಳ ಜೊತೆಯಲ್ಲಿ ಹೋದಾಗ ಚಾಸಾ–1 ರವರ ಮನೆಯ ಮುಂದೆ ಬಾಲರಾಜನಿಗೆ ಆರೋಪಿ 1 ರಿಂದ 7 ಗಳಾದ ನೀವುಗಳು ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವು ಮಾಡಿದ್ದು, ಅದೇ ದಿನ ದಿನಾಂಕ, 22.06.2020 ರಂದು ರಾತ್ರಿ 08:30 ಗಂಟೆಯ ಸಮಯದಲ್ಲಿ ಚಾಸಾ –1 ರವರ ಮನೆಯ ಬಳಿಯಲ್ಲಿ ಆರೋಪಿತರುಗಳಾದ ನೀವುಗಳು ಬಂದು ಪುನಃ ಗಲಾಟೆ ಮಾಡಿ ಬಾಲರಾಜನಿಗೆ ಕೈಗಳಿಂದ ಹೊಡೆದು ಚಾಸಾ–1 ರವರಿಗೆ ಹೊಡೆಯಲು ಹೋಗಿದ್ದು, ಮತ್ತೆ ದಿನಾಂಕ, 25.06.2020 ರಂದು ಸಂಜೆ ಸುಮಾರು 07:30 ಗಂಟೆಯ ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಚಾಸಾ–1 ರವರ ಮನೆಯ ಬಳಿಯಲ್ಲಿ ಬಂದು ನಾವು ನಿಮಗೆ ಹೊಡೆದವು ನೀವು ಏನು ಕಿತ್ತುಕೊಂಡ್ರಿ ಆಸ್ಪತ್ರೆ ಖರ್ಚು ಅಂತ 6000 ರೂಗಳನ್ನು ಕೇಳಿದಿರಿ ಹೀಗೆ ಜೀವನ ಮಾಡುವ ಬದಲು ನೀನು ಸಾಯುವುದೇ ವಾಸಿ ನೀನು

ಬದುಕಿರುವುದು ವೇಸ್ಟ್ ಎಂದು ಬಾಲರಾಜನಿಗೆ ಬೈದಿದ್ದು, ಆರೋಪಿತರುಗಳಾದ ನೀವುಗಳು ಬಾಲರಾಜು ದಾರಿಯಲ್ಲಿ ಸಿಕ್ಕಾಗಲೆಲ್ಲ ನೀನು ಇನ್ನು ಬದುಕಿದ್ದಿಯಾ ಇನ್ನು ಸತ್ತಿಲ್ಲವೆ ಎಂದು ಮಾನಸಿಕವಾಗಿ ಹಿಂಸೆ ನೀಡಿ ಸಾಯಲು ದುಷ್ಪ್ರೇರಣೆ ನೀಡುತ್ತಿದ್ದು, ಇವರ ಮಾನಸಿಕ ಹಿಂಸೆಯನ್ನು ನನಗೆ ತಡೆಯಲಾಗುತ್ತಿಲ್ಲ. ನಾನು ಸಾಯುತ್ತೇನೆ ಎಂದು ಚಾಸಾ–1 ರವರ ಜೊತೆಯಲ್ಲಿ ಬಲರಾಜನು ತಿಳಿಸಿದ್ದು, ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಪದೇ ಪದೇ ಬಾಲರಾಜನಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿ ಸಾಯಲು ದುಷ್ಪ್ರೇರಣೆ ನೀಡಿದ್ದರಿಂದ ಬಾಲರಾಜನು ದಿನಾಂಕ 27.06.2020 ರಂದು ರಾತ್ರಿ 10:00 ಗಂಟೆಯ ಸಮಯದಲ್ಲಿ ಮೂಲೆಪೆಟ್ಲು ಗ್ರಾಮದ ದಂಡಮ್ಮ ದೇವಸ್ಥಾನದ ಮುಂಭಾಗ ಕಬ್ಬಿಣದ ಪೈಪಿಗೆ ಟವಲ್ ನಿಂದ ನೇಣು ಬಿಗಿದುಕೊಂಡು ಮೃತ ಪಟ್ಟಿರುವುದು ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 323, 306 ಸಹವಾಚಕ 34 ರೀತ್ಯಾ ಅಪರಾಧವೆಸಗಿರುತ್ತೀರಿ.

ಈ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿಮ್ಮನ್ನು ಅಧಿವಿಚಾರಣೆಗೆ ಒಳಪಡಿಸಲು ಆದೇಶಿಸುತ್ತಿದ್ದೇನೆ.

**(ಟಿ.ಗೋವಿಂದಯ್ಯ)**
ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು ಹುಣಸೂರು ಪೀಠ.